ಶ್ರೀ ಸಿದ್ದರಾಮಯ್ಯ : ಮಾನ್ಯ ಉಪಾಧ್ಯಕ್ಷರೇ, ಕೋದಂಡರಾಮಯ್ಯನವರು ಇದ್ದಾಗ ಲಾಟರಿ ಬಗ್ಗೆ ಕೋರ್ಟ್ ಸ್ಟೇ ಆರ್ಡರ್‌ಗಳು ಇರಲಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಲಾಟರಿ ಬಗ್ಗೆ ಇರಲಿಲ್ಲ.

ಶ್ರೀ ಸಿದ್ದರಾಮಯ್ಯ : ಈಗ ಏನಾಗಿದೆಯೆಂದರೆ, ಲಾಟರಿಯನ್ನು ನಿಲ್ಲಿಸಬೇಕು ಎನ್ನುವ ವಿಚಾರದಲ್ಲಿ ನಿಮ್ಮಷ್ಟೇ ಕಳಕಳಿ ನಮಗೂ ಇದೆ. ಆದರೆ ಪೋಲೀಸಿನವರು ಏನು ಬೇಕಾದರೂ ಮಾಡಬಹುದು ಎಂದು ಸಾಮಾನ್ಯವಾಗಿ ಜನರು ತಿಳಿದುಕೊಂಡಿರುತ್ತಾರೆ.

ಶ್ರೀ ಹೆಚ್. ಎನ್. ನಂಜೇಗೌಡ : ಮಾನ್ಯ ಸಿದ್ಧರಾಮಯ್ಯನವರೇ, ನಿಮಗೆ ಅದರ ಬಗ್ಗೆ ಗೊತ್ತಾಗದಿದ್ದರೆ ಸಿಂಧ್ಯಾರವರನ್ನು ಕೇಳಿ. ಅವರು ಹೇಳಿಕೊಡುತ್ತಾರೆ. ಇದರಲ್ಲೇ ಅಫೆನ್ಸ್ ಮಾಡಬೇಕೆಂದಲ್ಲ, ಸುಳ್ಳು ಕೇಸ್ ಹಾಕಿ ಅವರನ್ನು ಮಟ್ಟ ಹಾಕಬಹುದು.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಉಪಾಧ್ಯಕ್ಷರೇ, ನಾನು ನಂಜೇಗೌಡರ ಬಗ್ಗೆ ಬಹಳ ಅಭಿಮಾನ ಮತ್ತು ಗೌರವ ಇಟ್ಟುಕೊಂಡಿದ್ದೇನೆ. ಅವರು ಹೇಳಿದ್ದೆಲ್ಲಾ ಕೇಳಿದ್ದೇನೆ. ಆದರೆ ಇಂದು ಅವರು ಸಿಂಧ್ಯಾರವರನ್ನು ಬೇಕಾದರೆ ಕೇಳಿ ಅವರು ಹೇಳಿಕೊಡುತ್ತಾರೆ ಎಂದರೆ ಹೇಗೆ? ಇದು ದಾಖಲೆಗೆ ಹೋಗದಿದ್ದರೆ ಒಳ್ಳೆಯದು.

ಶ್ರೀ ಸಿದ್ದರಾಮಯ್ಯ : ಇದನ್ನು ನಿಲ್ಲಿಸುವುದಕ್ಕೆ ಅವರದೇನಾದರೂ ಒಳ್ಳೆಯ ಸಲಹೆ ಇದ್ದರೆ ಅದನ್ನೂ ತೆಗೆದುಕೊಳ್ಳುತ್ತೇನೆ. ಬಡವರನ್ನು ಹಾಳು ಮಾಡಬೇಕೆಂದು ಸರ್ಕಾರಕ್ಕೆ ಆಸಕ್ತಿಯಿಲ್ಲ. ಇದರ ಬಗ್ಗೆ ಸ್ಪಷ್ಟವಾಗಿ ಈಗಾಗಲೇ ಹೇಳಿದ್ದೇನೆ. ಲಾಟರಿ ಮಾರಾಟಕ್ಕೆ ಯಾವುದಾದರೂ ಅಧಿಕಾರಿಗಳು ಕುಮ್ಮಕ್ಕು ಕೊಟ್ಟರೆ ಅವರ ಮೇಲೆ ಕೂಡ ಕ್ರಮ ತೆಗೆದುಕೊಳ್ಳುತ್ತೇವೆ. ನಾಳೆ ಇದರ ಬಗ್ಗೆ ಬಹು ದೀರ್ಘವಾಗಿ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತೇವೆ.

ಚರ್ಚ್‌ಗಳಲ್ಲಿ ಪ್ರಾರ್ಥನಾ ವಿಧಿಗಳನ್ನು ಕನ್ನಡದಲ್ಲಿ ಮಾಡುವ ಕುರಿತು

+ ಶ್ರೀಮತಿ ಬಿ.ಟಿ. ಲಲಿತಾನಾಯಕ್ (ದೇವದುರ್ಗ) : ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ಕ್ಯಾಥೋಲಿಕ್ ಕ್ರೈಸ್ತರ ಮಹಾಸಂಘ ಸುಮಾರು 15-20 ವರ್ಷಗಳಿಂದ ಕರ್ನಾಟಕದಲ್ಲಿ ಒಂದು ಹೋರಾಟವನ್ನು ನಡೆಸುತ್ತಿದೆ. ಈ ವಿಷಯದಲ್ಲಿ ನಾನು ಇವೊತ್ತು. ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ. ಚರ್ಚ್‌ಗಳಲ್ಲಿ ಪ್ರಾರ್ಥನಾ ವಿಧಿಗಳು ಕನ್ನಡದಲ್ಲಿ ಆಗಬೇಕೆಂದು ಹೇಳಿ ಸುಮಾರು 15-20 ವರ್ಷಗಳಿಂದ ಹೋರಾಟ ಮಾಡುತ್ತಿದ್ದರೂ ಕೂಡ ಇವರಿಗೆ ತಮಿಳು ಕ್ರೈಸ್ತರು ಮತ್ತು ಕನ್ನಡೇತರರು ಬಹಳ ತೊಂದರೆಯನ್ನು ಕೊಡುತ್ತಿದ್ದಾರೆ ಮತ್ತು ಇದು ಸಾಧ್ಯವಾಗದ ರೀತಿಯಲ್ಲಿ ಅವರಿಗೆ ಅಡ್ಡಿ ಆಡಚಣೆಗಳನ್ನು ಉಂಟುಮಾಡುತ್ತಿದ್ದಾರೆ. ಇದಕ್ಕಾಗಿ ಇವರ ಪ್ರಾರ್ಥನೆ ಏನೆಂದರೆ ಈ ವಿಷಯದಲ್ಲಿ ಸರ್ಕಾರ ಮಧ್ಯ ಪ್ರವೇಶಿಸಿ ನ್ಯಾಯ ದೊರಕಿಸಿಕೊಡಬೇಕೆಂದಿದ್ದಾರೆ. ಏಕೆಂದರೆ ಇಂದು ರಾಜ್ಯದಲ್ಲಿ ಕನ್ನಡದಲ್ಲಿ ಉದ್ಯೋಗ, ಕನ್ನಡದಲ್ಲಿ ಮಾತನಾಡುತ್ತಿದ್ದೇವೆ, ಮತ್ತು

ಎಲ್ಲಾ ಸೌಕರ್ಯಗಳನ್ನು ಕನ್ನಡ ನಾಡಿನಲ್ಲಿ ನಾವು ಪಡೆಯುತ್ತಿರುವಾಗ ಕನ್ನಡದಲ್ಲಿ ಪೂಜಾ ವಿಧಿಯನ್ನು ನಡೆಸುವುದಕ್ಕೆ ತುಂಬಾ ತೊಂದರೆಯಾಗಿದೆ ಎನ್ನುವ ಕೊರಗನ್ನು ಇಂದು ತಮ್ಮ ಮುಂದೆ ಅವರ ಪರವಾಗಿ ಮಂಡಿಸುತ್ತಿದ್ದೇನೆ. ಅವರು ಆ ಬಗ್ಗೆ ಮನವಿ ಪತ್ರವನ್ನು ನನಗೆ ಕೊಟ್ಟಿದ್ದಾರೆ. ಮಾನ್ಯ ಉಪಾಧ್ಯಕ್ಷರೇ, 1962ರಲ್ಲಿ ವ್ಯಾಟಿಕನ್ ಸಮ್ಮೇಳನ ಎಂದು ನಡೆಯಿತು. ಆಗ ವಿಶ್ವದ ಎಲ್ಲಾ ಧರ್ಮಾಧ್ಯಕ್ಷರುಗಳು ಅಲ್ಲಿ ಸೇರಿ ಹಾಲಿ ಲ್ಯಾಟಿನ್ ಭಾಷೆಯಲ್ಲಿ ಚರ್ಚ್‌ಗಳಲ್ಲಿ ಪೂಜಾ ವಿಧಿಗಳು ಏನು ನಡೆಯುತ್ತಿದೆ ಅದು ಬೇಡ, ಅದರ ಬದಲು ಆಯಾ ಪ್ರಾಂತೀಯ ಭಾಷೆಯಲ್ಲಿಯೇ ಪೂಜಾ ವಿಧಿಗಳು ನಡೆಯಬೇಕು ಎನ್ನುವಂಥ ಆಜ್ಞೆಯನ್ನು ಜಾರಿಗೆ ತಂದರು. ಇದರಿಂದ ಇಡೀ ದೇಶದ ಕ್ರೈಸ್ತರು ಸಂತೋಷ ಪಟ್ಟರು. ಇದು ಇಡೀ ವಿಶ್ವದ ಕ್ರೈಸ್ತರಿಗೆ ಅನ್ವಯವಾಯಿತು. ಅದರನ್ವಯ ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳದಲ್ಲಿ ತಮ್ಮ ಪ್ರಾಂತೀಯ ಭಾಷೆಯಲ್ಲಿ ಪೂಜಾ ವಿಧಾನಗಳನ್ನು ಜಾರಿಗೆ ತಂದರು. ಆದರೆ ಕರ್ನಾಟಕಲ್ಲಿ ಮಾತ್ರ ಅದನ್ನು ಜಾರಿಗೆ ತರಲಿಲ್ಲ. ಆಗ ಮತ್ತೊಂದು ಆಯೋಗವನ್ನು ಪೋಪ್ ಗುರುಗಳು ಮಾಡಿ ಅದರಲ್ಲಿ ಮೂರು ಜನರ ಸಮಿತಿಯೊಂದನ್ನು ಮಾಡಿದರು. ಈ ಗುರುಗಳೂ ಕೂಡ ಇದನ್ನೇ ಎತ್ತಿಹಿಡಿದು ಎಲ್ಲಾ ರಾಜ್ಯಗಳ ಪ್ರಾಂತೀಯ ಭಾಷೆಯಲ್ಲಿ ಪೂಜಾ ವಿಧಿಗಳು ನಡೆಸಿದಂತೆ ಕರ್ನಾಟಕದಲ್ಲಿ ಕನ್ನಡದಲ್ಲಿ ಪೂಜಾ ವಿಧಾನಗಳು ನಡೆಯಬೇಕೆಂದು ಮತ್ತೊಂದು ಹೇಳಿಕೆಯನ್ನು ಕೊಟ್ಟರು. ನ್ಯಾಯಾಲಯ ಕೂಡ ಇದನ್ನೇ ಹೇಳಿತು. ಆದರೂ ಕೂಡ ಆ ಜನ ಅದನ್ನು ಕೇಳಿಲ್ಲ. ಕರ್ನಾಟಕ ತಮಿಳು ಸಂಘದವರು ನ್ಯಾಯಾಲಯಕ್ಕೆ ಹೋದರು. ನ್ಯಾಯಾಲಯ ಎರಡೂ ಬಾರಿಯೂ ಕೂಡ ಇವರ ಅರ್ಜಿಯನ್ನು ರದ್ದು ಮಾಡಿತು. ಇದಲ್ಲದೇ ಕೋರ್ಟ್ ಕನ್ನಡದಲ್ಲಿಯೇ ಪೂಜಾ ವಿಧಿಗಳು ನಡೆಯಬೇಕೆಂದು ಆರ್ಡರ್ ಮಾಡಿದೆ. ನ್ಯಾಯಾಲಯದ ಆದೇಶವನ್ನೂ ಕೂಡ ಮೂಲೆಗುಂಪು ಮಾಡಿ ಹಿಂಸೆ ಕೊಡುತ್ತಿದ್ದಾರೆ. ಆದುದರಿಂದ ಸರ್ಕಾರ ಇದಕ್ಕೆ ಸ್ಪಷ್ಟವಾದ ಭರವಸೆಯನ್ನು ಕೊಡಬೇಕು. ಕನ್ನಡದಲ್ಲಿಯೇ ಪೂಜಾ ವಿಧಾನಗಳು ನಡೆಯಬೇಕು. ಕನ್ನಡದ ಕ್ರೈಸ್ತರಿಗೆ ಎಲ್ಲಾ ವಿಧವಾದ ಸಹಾಯ ಕೊಡಬೇಕೆಂದು ಕೇಳುತ್ತಿದ್ದೇನೆ.

+ ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೇ, ನಾನೂ ಕೂಡ ಇದೇ ವಿಷಯದಲ್ಲಿ ಮಾತನಾಡಬೇಕೆಂದು ಕೊಟ್ಟಿದ್ದೇನೆ. ಇವತ್ತು ಮಾನ್ಯ ಸದಸ್ಯಿಣಿಯವರು ರೈಸ್ ಮಾಡಿರುವುದರಿಂದ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಇದು ಬಹಳ ಮುಖ್ಯವಾದ ವಿಷಯವಿದೆ.

ಉಪಾಧ್ಯಕ್ಷರು : ಇವತ್ತು ನೀವು ನೋಟೀಸ್ ಕೊಟ್ಟಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ : ನಾನು ಮೊನ್ನೆ ಕೊಟ್ಟಿದ್ದೆ. ಇದು ಬಹಳ ಪ್ರಾಮುಖ್ಯವಾದ ವಿಷಯ. ಇದರಲ್ಲಿ ಬಹಳ ಮುಖ್ಯವಾದ ವಿಷಯವಿದೆ. ಅವರು ಒಂದು ಸರ್ಕ್ಯೂಲರ್ ಹೊರಡಿಸಿದ್ದಾರೆ. ಮಾನ್ಯ ಸಿದ್ದರಾಮಯ್ಯನವರು ಕೇಳಬೇಕು, ಶ್ರೀಮತಿ ಲಲಿತಾ ನಾಯಕ್ ರವರು ಒಂದು ವಿಷಯವನ್ನು ಹೇಳಲಿಲ್ಲ. ಅದರಲ್ಲಿ ಏನು ಹೇಳಿದ್ದಾರೆಂದರೆ : "In the Bangalore City. It is not quite the

same. One has to take into consideration the special cosmopolitan situation here. The Kannadigas in Bangalore City form just 15 percent of the population". ಕೇವಲ ಕರ್ನಾಟಕದವರು 15 ಪರ್ಸೆಂಟ್ ಇದ್ದಾರೆ ಎಂದು ಕ್ರೈಸ್ತರು ಇವತ್ತು ಒಂದು ಸರ್ಕ್ಯೂಲರ್ ಹೊರಡಿಸಿದ್ದಾರೆ. "Just because the Bangalore is a capital of Karnataka State, this fractional group has to be supreme for at the bottom of this question is a supremacy of the Kannada language. Rome was not built in a day nor can the Bangalore turn into Kannadiga city in a short period of 5 years or less". ಇವರದ್ದು ಏನು ಉದ್ಧಟತನ ಅಂದರೆ ಕರ್ನಾಟಕದಲ್ಲಿ ಬೆಂಗಳೂರು ಕನ್ನಡಿಗರ ಸ್ಥಾನ ಅಲ್ಲ. 15 ಪರ್ಸೆಂಟ್ ಮಾತ್ರ ಕನ್ನಡಿಗರು ಇದ್ದಾರೆ. ಆದ್ದರಿಂದ ಇವರು ಹೇಳಿದ ಭಾಷೆಯೇ ಆಗಬೇಕು ಎನ್ನುವಂತಹ ಅರ್ಥದಲ್ಲಿ ಎಲ್ಲಾ ಚರ್ಚುಗಳಲ್ಲಿ ಇವತ್ತು ಸರ್ಕ್ಯೂಲರ್ ಕಳುಹಿಸಿದ್ದಾರೆ. ಆದುದರಿಂದ ಇವತ್ತು ಸನ್ಯಾಸ್ಯ ಲೀಲಾದೇವಿಯವರನ್ನು ಕೇಳಿಕೊಳ್ಳುತ್ತೇನೆ, ಕನ್ನಡ ನಮ್ಮ ಭಾಷೆ ಹೌದೋ ಅಲ್ಲವೋ? ಕನ್ನಡ ಅಂದಮೇಲೆ ಕರ್ನಾಟಕದಲ್ಲಿ ಇರತಕ್ಕಂಥ ಕನ್ನಡದ ಕ್ರೈಸ್ತರು ಅವರ ಚರ್ಚುಗಳಲ್ಲಿ ಕನ್ನಡದಲ್ಲಿ ಪ್ರಾರ್ಥನೆ ಮಾಡುವುದಕ್ಕೆ ಅವಕಾಶ ಇದೆಯೋ ಇಲ್ಲವೋ ಎಂಬುದನ್ನೂ ತಾವು ಹೇಳಬೇಕು.

ಉಪಾಧ್ಯಕ್ಷರು : ನೇಸರ್ಗಿಯವರೇ, ತಾವು ಭಾಷಣ ಪ್ರಾರಂಭ ಮಾಡಿದ್ದೀರಿ. ಇದನ್ನು ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದಾರೆ. ನೀವು ಭಾಷಣ ಮಾಡುವುದಕ್ಕೆ ಶುರು ಮಾಡಿದ್ದೀರಿ. ಇದಕ್ಕೆ ಬೇರೆ ಅವಕಾಶ ಕೇಳಿ. ಸಮಯ ಕೊಡುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮಾನ್ಯ ಉಪಾಧ್ಯಕ್ಷರೇ, ಭಾಷಣ ಅಲ್ಲ. ಕರ್ನಾಟಕದಲ್ಲಿ ಸಹಸ್ರಾರು ಮಂದಿ ಕನ್ನಡಿಗರು ಇದ್ದಾರೆ. ಆದುದರಿಂದ ಕರ್ನಾಟಕದಲ್ಲಿ ಕನ್ನಡಕ್ಕೆ ಆದ್ಯತೆ ದೊರೆಯಬೇಕು. ಕ್ರೈಸ್ತರಾಗಲಿ, ಮಹಮದೀಯರಾಗಲಿ ಎಲ್ಲಾ ಕಡೆ ಕನ್ನಡ ಬರಬೇಕು ಎನ್ನುವುದು ಎಲ್ಲರಿಗೂ ಅಭಿಲಾಷೆ. ಆದುದರಿಂದ ಈ ರೀತಿ ಸರ್ಕ್ಯೂಲರ್ ಹೊರಡಿಸಿರುವುದನ್ನು ನೀವು ಬ್ಯಾನ್ ಮಾಡುತ್ತೀರಾ?

ಉಪಾಧ್ಯಕ್ಷರು : ಹೀಗೆ ಎಲ್ಲರೂ ಎದ್ದರೆ ಹೇಗೆ? ಇದು ಯಾವ ಪದ್ಧತಿ?

ಶ್ರೀ ವಾಟಾಳ್ ನಾಗರಾಜ್ : ಕನ್ನಡ ಪದ್ಧತಿ. ಒಂದು ನಿಮಿಷ ನಾನು ಮಾತನಾಡುತ್ತೇನೆ ತಾವು ಸಿಟ್ಟಿಗೇಳಬಾರದು. ಏನಾಗಿದೆ ಎಂದರೆ 15 ವರ್ಷದಿಂದ ಕನ್ನಡ ಕ್ಯಾಥೋಲಿಕ್ ಕ್ರೈಸ್ತ ಕನ್ನಡ ಸಂಘ ನಿರಂತರವಾಗಿ ಹೋರಾಟ ಮಾಡುತ್ತಿದೆ. ಮತ್ತು ವ್ಯಾಟಿಕೆನ್ ಸಿಟಿ ಪೋಪ್ ಏನಿದ್ದಾರೆ ಅವರ ಸುತ್ತೋಲೆ ಪ್ರಕಾರ ಆಯಾಯ ರಾಜ್ಯ ಭಾಷೆಗಳಲ್ಲಿ ಅಲ್ಲಿ ಪೂಜೆ ಪ್ರತಿಯೊಂದು ನಡೆಯಬೇಕಾದ್ದು ಕಡ್ಡಾಯ. ಅದು ಸಂವಿಧಾನ ಇದ್ದಹಾಗೆ. ಮತ್ತು ಅದು ಒಂದು ಅತ್ಯಂತ ಪರಮ ಪವಿತ್ರವಾದಂತಹ ಆದೇಶ ಇದ್ದ ಹಾಗೆ. ಆ ಆದೇಶವನ್ನು ತಮಿಳು ನಾಡಿನಲ್ಲಿ, ಕೇರಳದಲ್ಲಿ ಹಾಗೂ ಆಂಧ್ರದಲ್ಲಿ ಪಾಲಿಸುತ್ತಿದ್ದಾರೆ. ಆದರೆ ಕರ್ನಾಟಕದಲ್ಲಿ ಮಾತ್ರ ಪಾಲಿಸುತ್ತಿಲ್ಲ. ಅದಕ್ಕೋಸ್ಕರ ತಮ್ಮಲ್ಲಿ ಕಳಕಳಿಯಿಂದ

ಮನವಿ ಮಾಡುತ್ತಿದ್ದೇನೆ ಕನ್ನಡದಲ್ಲಿ ಇರತಕ್ಕಂಥ ಕ್ರೈಸ್ತ ದೇವಾಲಯಗಳು ನೂರಕ್ಕೆ ನೂರು ಕನ್ನಡದಲ್ಲಿ ಪೂಜೆಯನ್ನು ನಡೆಸಬೇಕು ಎನ್ನುವಂತಹ ತತ್ವ, ಸಿದ್ಧಾಂತ ಬಿಟ್ಟು ಬೇರೆ ದಾರಿ ತಪ್ಪಬಾರದು. ಆದುದರಿಂದ ಈ ಸಭೆಯ ಮೂಲಕ ತಮ್ಮ ಸರ್ಕಾರಕ್ಕೆ ಒತ್ತಾಯ ತರುತ್ತಿದ್ದೇನೆ, ಪೋಪ್ ಹೇಳಿರತಕ್ಕಂಥ ರೀತಿಯಲ್ಲಿ ವ್ಯಾಟಿಕನ್ ಸಿಟಿ ಆದೇಶದ ಪ್ರಕಾರ ಆಯಾಯ ಪ್ರಾದೇಶಿಕ ಭಾಷೆಯಲ್ಲಿ ನಡೆಯಬೇಕು ಎಂದಿದೆ. ದಯಮಾಡಿ ಸರ್ಕಾರ ಇದರ ಮಧ್ಯ ಪ್ರವೇಶ ಮಾಡಿ ಎಲ್ಲಾ ದೇವಾಲಯಗಳಿಗೆ ಎಚ್ಚರಿಕೆ ನೀಡಿ ಕನ್ನಡದಲ್ಲಿ ನಡೆಯಬೇಕು ಎನ್ನುವ ಬಗ್ಗೆ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕೆಂದು ಕಳಕಳಿಯಿಂದ ಕೇಳುತ್ತಿದ್ದೇನೆ.

+ SRI. J.A. FERNANDEZ (Nominated) : Sir, I honestly submit that this matter should not be discussed in this House. This is a purely religious matter on the one hand and we are all aware that in Catholic Church there is definitely a predominance given to the use of Kannada. There are areas in Karnataka State, particularly in Bangalore. where predominance may belong to another language. Therefore, all the languages are being given equal standing as far as other languages are concerned. But, basically there are narrations and they are being followed to the best of my knowledge, the Kannada is given adequate predominance and pre-eminence in Church service. I would like to request the Hon'ble Member to introduce Kannada in the Mosques and the Temples where other languages are being used. May be if they start with the Muslim congregaiton and introduce Kannada there, then we, as a smallest minority,will be happy to follow.

+ ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಉಪಾಧ್ಯಕ್ಷರೇ, ಶ್ರೀಮತಿ ಲಲಿತಾ ನಾಯಕ್‌ರವರು, ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಹಾಗೂ ಮಾನ್ಯ ವಾಟಾಳ್‌ರವರು ಮಾತನಾಡಿದ್ದಾರೆ. ನಾವು ಕನ್ನಡ ರಾಜ್ಯದಲ್ಲಿ ಇದ್ದೇವೆಯೋ ಇಲ್ಲವೋ, ಕನ್ನಡದ ರಾಜಧಾನಿ ಬೆಂಗಳೂರು ಹೌದೋ, ಅಲ್ಲವೋ ಎನ್ನುವುದು ನಿರ್ವಿವಾದ. ಇದು ಕನ್ನಡದ ರಜಧಾನಿ. ಇವತ್ತು ನಾವು ಕನ್ನಡಿಗರು, ಕನ್ನಡ ಭಾಷೆಗೆ ಪ್ರಾಮುಖ್ಯತೆಯನ್ನು ಕೊಡಬೇಕು ಎನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಇವತ್ತು ಏನಾಗಿದೆ ಎಂದರೆ 15 ವರ್ಷದಿಂದ ನಡೆಯತಕ್ಕಂಥ ಕ್ರೈಸ್ತ ಚರ್ಚುಗಳಲ್ಲಿ ಸಾಮೂಹಿಕ ಪ್ರಾರ್ಥನೆ ಕನ್ನಡದಲ್ಲಿ ನಡೆಯಬೇಕೆಂದು ಅನೇಕ ಜನ ಕ್ರೈಸ್ತರು ಭಿನ್ನಹ ಮಾಡಿಕೊಂಡಿದ್ದಾರೆ. ಕೆಲವು ಕಾರಣದಿಂದ ಮಾನ್ಯ ಲಲಿತಾ ನಾಯಕ್‌ರವರು ಹೇಳಿದ ಹಾಗೆ ಅವರುಗಳು ಏಕೆ ಮಾಡಬೇಕೆಂದು ಕೇಳಿದ್ದಾರೆ. ಈ ವಿಚಾರವನ್ನು ನಾನು ನಮ್ಮ ಕನ್ನಡ ಪ್ರಾಧಿಕಾರದ ಅಧ್ಯಕ್ಷರಿಗೆ ಗಮನಕ್ಕೆ ತಂದೆ. ಅವರು ಕ್ರೈಸ್ತ ಪ್ರತಿನಿಧಿಗಳ ಸಭೆಯನ್ನು ಕರೆದರು. ಏಕೆ ಈ ರೀತಿ ಎಂದು ಕನ್ನಡ ಪ್ರಾಧಿಕಾರದ ಅಧ್ಯಕ್ಷರಾದ ಚಂಪಾರವರಿಗೆ ಒಂದು ಸಭೆಯನ್ನು ಕರೆಯಿರಿ ಎಂದು ಹೇಳಿದಾಗ,

ಆ ಸಭೆಯನ್ನು ಪ್ರಶ್ನಿಸಿ ಏಕೆ ಸಭೆಯನ್ನು ಕರೆದಿದ್ದಾರೆ ಎಂದು ನ್ಯಾಯಾಲಯದಲ್ಲಿ ಒಂದು ಅರ್ಜಿಯನ್ನು ಕೊಟ್ಟಿದ್ದಾರೆ. ಕನ್ನಡ ಪ್ರಾಧಿಕಾರದ ಅಧ್ಯಕ್ಷರಿಗೆ ಸಭೆ ಕರೆಯುವುದಕ್ಕೆ ಯಾವ ಅಧಿಕಾರ ಇದೆ ಎಂದು ಹೇಳಿ ಕರ್ನಾಟಕದ ಉಚ್ಚ ನ್ಯಾಯಾಲಯದಲ್ಲಿ ಅವರುಗಳು ಅರ್ಜಿ ಹಾಕಿದ್ದಾರೆ. ಅದು ಪರಶೀಲನೆಯಲ್ಲಿದೆ. ಮಾನ್ಯ ಸದಸ್ಯರು ಏನು ಹೇಳಿದ್ದಾರೆ, ಸಾಮೂಹಿಕವಾಗಿ ಕ್ರೈಸ್ತ ಜನಾಂಗದವರು ಕನ್ನಡದಲ್ಲಿ ಪ್ರಾರ್ಥನೆ ಮಾಡಬೇಕು ಎನ್ನುವುದಕ್ಕೆ, ಕನ್ನಡದಲ್ಲಿ ಓದುವುದಕ್ಕೆ ಪ್ರಾರಂಭ ಮಾಡಬೇಕೆಂದು ಕಳಕಳಿಯಿಂದ, ನಾನು ಈ ಸಭೆಯ ಮುಖಾಂತರ ಕೇಳಿಕೊಳ್ಳುತ್ತೇನೆ. ಯಾವುದೇ ಭಾಷೆಯಲ್ಲಿ ಪ್ರಾರ್ಥನೆ ಮಾಡುವುದಕ್ಕಿಂತ ಅಲ್ಲಿಗೆ ಹೋಗತಕ್ಕಂಥ ಕ್ರೈಸ್ತ ಬಾಂಧವರು ಏನಿದ್ದಾರೆ, ಅವರು ಕನ್ನಡದಲ್ಲಿ ಪ್ರಾರ್ಥನೆ ಪ್ರಾರಂಭ ಮಾಡಿದರೆ ಅದು ಬೆಳಕಿಗೆ ಬರುವುದಕ್ಕೆ ಅನುಕೂಲವಾಗುತ್ತದೆ. ನಮ್ಮ ದುರ್ದೈವ ಎಂದರೆ ಯಾವುದೇ ಒಂದು ಕ್ಷೇತ್ರದಲ್ಲಿಯೂ ಕೂಡ ಕನ್ನಡಿಗರು ಇರತಕ್ಕಂಥ ಅಭಿಮಾನಿಗಳು ಕನ್ನಡದಲ್ಲಿ ಪ್ರಾರಂಭ ಮಾಡದೇ ಇದ್ದರೆ ಈ ದುರ್ದೈವ ಸಂಭವಿಸುತ್ತದೆ. ಚರ್ಚಿಗೆ ಹೋದಾಗ ಅವರು ಕನ್ನಡದ ಬೈಬಲ್ ತೆಗೆದುಕೊಂಡು ಹೋಗಬಾರದು ಎಂದು ಯಾರು ಹೇಳುತ್ತಿದ್ದಾರೆ ಇವತ್ತು? ಕನ್ನಡದಲ್ಲಿ ಪ್ರಾರಂಭ ಮಾಡಬೇಕು. ಇದು ಕೇವಲ ನ್ಯಾಯಾಲಯದಿಂದ ಹೋಗಿ ಅಥವಾ ಸರ್ಕಾರದ ಸುತ್ತೋಲೆ ಆದತಕ್ಷಣ ಅದು ಆಗುವುದಿಲ್ಲ. ಇದರ ಬಗ್ಗೆ ನಾವು ಚಿಂತನೆ ಮಾಡುತ್ತಿದ್ದೇವೆ. ಕನ್ನಡದ ಪ್ರಾಧಿಕಾರದ ಅಧ್ಯಕ್ಷರಿಗೆ ಇದರ ಬಗ್ಗೆ ಒಂದು ಹಂತಕ್ಕೆ ಬನ್ನಿ ಎಂದು ಕೇಳಿಕೊಂಡಿದ್ದೇವೆ.

ಗುಲ್ಬರ್ಗಾ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ : ಪಂಗಡದ ಕಾರ್ಯಕರ್ತರ ಮೇಲೆ ಹಲ್ಲೆ

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೇ, ಯಾರು ಇದಕ್ಕೆ ಉತ್ತರ ಕೊಡುತ್ತಾರೋ ಗೊತ್ತಿಲ್ಲ. ಇದನ್ನು ಯಾರು ಕೇಳುತ್ತಾರೆ?

ಶ್ರೀ ಹೆಚ್. ಡಿ. ಬಸವರಾಜ್ : ಮಾನ್ಯ ಉಪಾಧ್ಯಕ್ಷರೇ, ನಾನೂ ಸಹ ಇದಕ್ಕೆ ಸಹಿ ಮಾಡಿದ್ದೇನೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಗೃಹ ಸಚಿವರು ತಮಿಳುನಾಡಿಗೆ ಹೋಗಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಹೋಗಿದ್ದಾರೆ. ಅವರು ಇವತ್ತು ಮಧ್ಯಾಹ್ನ ವಾಪಸ್ಸು ಬರುತ್ತಾರೆ. ಆದುದರಿಂದ ಮಧ್ಯಾಹ್ನ ಸ್ಟೇಟ್‌ಮೆಂಟ್ ಕೋಡೋಣ ಅಥವಾ ನಾಳೆ ಕೊಡೋಣ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಪ್ರಸ್ತಾಪ ಮಾಡುತ್ತೇನೆ. ಅದನ್ನು ಕೇಳಿಸಿಕೊಳ್ಳುವುದಕ್ಕಾದರೂ ಇರಬೇಕಲ್ಲಾ.

ಶ್ರೀ ಸಿದ್ದರಾಮಯ್ಯ : ಇಲ್ಲ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಕಿವಿ ನಾಗೇಗೌಡರ ಕಡೆ ಇದೆ. ನಮ್ಮ ಕಡೆ ಇರಲಿಲ್ಲ.